# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂ ಎಫ್ ಸಿ ರವರ ನ್ಯಾಯಾಲಯ, ಮಳವಳ್ಳಿ

# ಸಿಸಿ ನಂಃ 45/2014

**ಪಿರ್ಯಾದಿ** ಃ ರಾಜ್ಯ ಸರ್ಕಾರ,
**ಬೆಳಕವಾಡಿ ಪೊಲೀಸ್ ಠಾಣೆ ಮುಖೇನ.**

- ವಿರುದ್ದ -

**ಆರೋಪಿ** ಃ ಲೋಕೇಶ್ ಬಿನ್ ರಾಮನಾಯಕ,
ವಯಸ್ಸುಃ 27 ವರ್ಷ,
ವಾಸಃ ನಂ.109, ಮಾದಹಳ್ಳಿ ಕೊಪ್ಪಲು,
ಬನ್ನಿಕುಪ್ಪೆ ಅಂಚೆ, ಕಸಬಾ ಹೋಬಳಿ,
ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

**ಕಲಂ 313 ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ ಆರೋಪಿಯ ಹೇಳಿಕೆ.**

1) ಅಭಿಯೋಜನೆ ಪರ ಹೇಳಿದ ಸಾಕ್ಷಿಗಳ ಹೇಳಿಕೆಯನ್ನು ಕೇಳಿದ್ದೀರಾ?

ಉತ್ತರಃ

2) ಪ್ರಾ.ಸಾ-3 ಶ್ರೀ ಚಿಕ್ಕಗುಳ್ಳಪ್ಪ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುವುದೇನೆಂದರೆ, 2013 ರ ಸಾಲಿನಲ್ಲಿ ಅವರು ಸಹಾಯಕ ಸಂಚಾರಿ ನಿರೀಕ್ಷಕರಾಗಿ ಕೆಲಸ ನಿರ್ವಹಿಸುತ್ತಿರುವಾಗ ದಿನಾಂಕ 10.04.2013 ರಂದು ಮಧ್ಯಾಹ್ನ ಸುಮಾರು 2.30 ಗಂಟೆಗೆ ಬೆಳಕವಾಡಿಯಿಂದ ಮಳವಳ್ಳಿಗೆ ಬರುತ್ತಿದ್ದ ಕೆಎ-09-ಎಫ್-3477 ನಂಬರಿನ ಕೆ.ಎಸ್.ಅರ್.ಟಿ.ಸಿ. ಬಸ್ಸನ್ನು ತಡೆದು ತನಿಖೆ ಮಾಡಿದಾಗ ಅದರಲ್ಲಿ ಒಟ್ಟು 32 ಜನ ವಯಸ್ಕರು, 3 ಜನ ಮಕ್ಕಳು ಮತ್ತು ಒಬ್ಬರು ಪಾಸ್ ಹೊಂದಿದ್ದ ವ್ಯಕ್ತಿಯು ಇದ್ದರು ಎಂದು, ಅದರ ಪೈಕಿ ಆರೋಪಿಯಾದ ನಿಮ್ಮನ್ನು ತನಿಖೆಗೆ ಒಳಪಡಿಸಿದಾಗ ಉಚಿತ ಪಾಸ್ ಚೀಟಿಯ ಕಲರ್ ಜೆರಾಕ್ಸ ನಿಂದ ತಯಾರಿಸಿಕೊಂಡಿದ್ದ ನಕಲಿ ಪಾಸ್ ಕಂಡು ಬಂದಿರುತ್ತದೆ ಎಂದು ಅದನ್ನು ಪರಿಶೀಲಿಸಿದಾಗ ಅದರ ಸಂಖ್ಯೆ 01426 ಎಂದು ಇದ್ದು ಅದರ ಮೂಲ ಪಾಸನ್ನು ಬೆಂಗಳೂರು ನಗರದ ಕೆಂಗೇರಿಯ ಕೆ.ಎಸ್.ಅರ್,ಟಿ.ಸಿ. 6ನೇ ಘಟಕದಿಂದ ನೀಡಿರುವುದು ಕಂಡು ಬಂದಿರುತ್ತದೆ ಎಂದು, ಸದರಿ ಜೆರಾಕ್ಸನ್ನು ಪಡೆದ

ಆರೋಪಿಯಾದ ನೀವು ಎರಡು ನಕಲಿ ಪಾಸುಗಳನ್ನು ತಯಾರಿಸಿಕೊಂಡು ಆ ಪಾಸುಗಳಲ್ಲಿ ದಿನಾಂಕ 31.12.2012 ಎಂದು ಅಂತ್ಯಗೊಂಡಿದ್ದ ದಿನಾಂಕದ 2012 ರ ಬದಲಾಗಿ 2014 ಎಂದು ತಿದ್ದುಕೊಂಡು ಅದರ ಮೇಲೆ ಇದ್ದ ಮೂಲ ಪೋಟೋ ಹೆಸರನ್ನು ಅಳಿಸಿ ಹಾಕಿ ಆರೋಪಿಯಾದ ನೀವು ನಿಮ್ಮ ಪಾಸ್ ಪೋರ್ಟಸೈಜ್ ಪೋಟೋವನ್ನು ಅಂಟಿಸಿ ಸದರಿ ಪಾಸನ್ನು ದುರಬಳಕೆ ಮಾಡಿಕೊಂಡಿರುತ್ತೀರಾ ಎಂದು, ಸದರಿ ನಕಲಿ ಪಾಸನ್ನು ಆರೋಪಿಯಾದ ನೀವು ಬಳಸಿ ಬಸ್ ರೂಟ್ ಸಂಖ್ಯೆ 14/15 ರಲ್ಲಿ ಹಲವಾರು ಬಾರಿ ಪ್ರಯಾಣ ಮಾಡಿ ಸಂಸ್ಥೆಗೆ ಸುಮಾರು 18,750/- ರೂಗಳನ್ನು ನಷ್ಟ ಉಂಟು ಮಾಡಿರುತ್ತೀರಾ ಎಂದು, ಆರೋಪಿಯಾದ ನಿಮ್ಮನ್ನು ವಶಕ್ಕ ಪಡೆದು ಬೆಳಕವಾಡಿ ಪೋಲೀಸ್ ಠಾಣೆಯಲ್ಲಿ ಹಾಜರುಪಡಿಸಿ ದೂರು ನೀಡಿರುವುದಾಗಿ, ಪೋಲೀಸರು ತನ್ನ ಮತ್ತು ಇತರರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರಃ**

3) ಪ್ರಾಸಾ 4 ಶ್ರೀ ಕೆ,ಜಯಪ್ರಕಾಶ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುವುದೇನೆಂದರೆ, 2013 ರಲ್ಲಿ ಅವರು ಕೆ.ಎಸ್.ಅರ್.ಟಿ.ಸಿ. ತನಿಖಾ ದಳದಲ್ಲಿ ಸಂಚಾರಿ ನಿಯಂತ್ರಕನಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ದಿನಾಂಕ 10.04.2013 ರಂದು ಬೆಳಕವಾಡಿ ಪೋಲೀಸರು ಆರೋಪಿಯಾದ ನಿಮ್ಮಿಂದ 2 ನಕಲಿ ಕೆ.ಎಸ್.ಅರ್.ಟಿ.ಸಿ. ಬಸ್ ಪಾಸುಗಳನ್ನು ಅಮಾನತ್ತುಪಡಿಸಿಕೊಂಡು ಪಂಚನಾಮೆ ಮಾಡಿದಾಗ ಸಹಿ ಮಾಡುವುದಾಗಿ, ದಿನಾಂಕ 10.04.2013 ರಂದು ಅವರು ಬಸ್ಸನ್ನು ತಪಾಸಣೆ ಮಾಡಿದಾಗ ಆರೋಪಿಯಾದ ನೀವು ನಕಲಿ ಪಾಸುಗಳನ್ನು ಬಳಸಿ ಪ್ರಯಾಣ ಮಾಡುತ್ತಿರುತ್ತೀರಾ ಎಂದು, ಈ ಸಂಬಂಧವಾಗಿ ಆರೋಪಿಯಾದ ನಿಮ್ಮ ಬಳಿ ನಕಲಿ ಪಾಸುಗಳು ಸಿಕ್ಕಿರುತ್ತೇವೆಂದು, ಆರೋಪಿಯಾದ ನೀವು ಸಂಸ್ಥೆಯ ನೌಕರ ಮತ್ತು ನಿರ್ವಾಹಕ ಎಂದು ಹೇಳಿಕೊಂಡು ಬಸ್ಸಿ ನಲ್ಲಿ ಪ್ರಯಾಣ ಮಾಡುತ್ತೀರುತ್ತೀರಾ ಎಂದು, ಇದರಿಂದ ಸಂಸ್ಥೆಗೆ 18,750-00 ರೂಗಳು ನಷ್ಟ ಉಂಟಾಗಿರುತ್ತದೆ ಎಂದು ಮತ್ತು ಈ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

**ಉತ್ತರಃ**

4) ಪ್ರಾ.ಸಾ- 6 ಶ್ರೀ ಅನಿಲ್ ಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ ದಿನಾಂಕ 10.04.2013 ರಂದು ಕೆಎ-09-ಎಫ್ -3477 ನಂಬರಿನ ಕೆ.ಎಸಿ.ಅರ್.ಟಿ,ಸಿ. ಬಸ್ಸಿ ನಲ್ಲಿ ಅವರು ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಬೆಳಕವಾಡಿಯಿಂದ ಹೊಸಹಳ್ಳಿ ಕ್ರಾಸ್ ಗೆ ಸದರಿ ಬಸ್ಸು ಬಂದಾಗ ಇಲಾಖೆಯ ತನಿಖಾ ದಳದ ಅಧಿಕಾರಿಗಳು ಬಸ್ಸನ್ನು ತಪಾಸಣೆ ಮಾಡಿದಾಗ ಆರೋಪಿಯಾದ ನೀವು ಕೆ.ಎಸ್.ಅರ್.ಟಿ,ಸಿ.ಸಿಬ್ಬಂದಿ ಎಂದು ಹೇಳಿಕೊಂಡು ಪಾಸನ್ನು ನಕಲು

ಮಾಡಿ ಪ್ರಯಾಣ ಮಾಡುತ್ತಿದ್ದ ಬಗ್ಗೆ ಸಿಕ್ಕಿಬಿದ್ದಿರುತ್ತೀರಾ ಎಂದು ಮತ್ತು ಅವರು ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ನೀಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ ?

**ಉತ್ತರಃ**

5) ಪ್ರಾ.ಸಾ-7 ಶ್ರೀ ಶಿವ ರವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ ದಿನಾಂಕ 10.04.2013 ರಂದು ಕೆಎ-09-ಎಫ್ 3477 ನಂಬರಿನ ಕೆ.ಎಸ್.ಅರ್.ಟಿ,ಸಿ ಬಸ್ಸಿ ನಲ್ಲಿ ನಿರ್ವಾಹಕನಾಗಿ ಕೆಲಸ ನಿರ್ವಹಿಸುತ್ತಿರುವಾಗ ಬೆಳಕವಾಡಿಯಿಂದ ಹೊಸಹಳ್ಳಿ ಕ್ರಾಸ್ ಗೆ ಸದರಿ ಬಸ್ಸು ಬಂದಾಗ ಇಲಾಖೆಯ ತನಿಖಾ ದಳದ ಅಧಿಕಾರಿಗಳು ಬಸ್ಸನ್ನು ತಪಾಸಣೆ ಮಾಡಿದಾಗ ಆರೋಪಿಯಾದ ನೀವು ಕೆ.ಎಸ್.ಅರ್.ಟಿ,ಸಿ.ಸಿಬ್ಬಂದಿ ಎಂದು ಹೇಳಿಕೊಂಡು ಪಾಸನ್ನು ನಕಲು ಮಾಡಿ ಪ್ರಯಾಣ ಮಾಡುತ್ತಿದ್ದ ಬಗ್ಗೆ ಸಿಕ್ಕಿಬಿದ್ದಿರುತ್ತೀರಾ ಎಂದು ಮತ್ತು ಅವರು ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ನೀಡಿರುವುದಾಗಿ, ಇದರಿಂದ ತಮ್ಮ ಸಂಸ್ಥೆಗೆ ಆರ್ಥಿಕ ನಷ್ಟ ಉಂಟಾಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ ?

**ಉತ್ತರಃ**

6) ಪ್ರಾ.ಸಾ- 5 ಶ್ರೀಮತಿ ಸುವರ್ಣ ರವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ, ತಾನು ಕೆ.ಎಸ್.ಅರ್.ಟಿ.ಸಿ. ಸಂಸ್ಥೆಯ ಸಿಬ್ಬಂದಿಯಾಗಿದ್ದು, ತನ್ನ ಇಲಾಖೆಯ ವಹಿಯಿಂದ ತನಗೆ ಉಚಿತ ಪ್ರಯಾಣದ ಪಾಸನ್ನು ನೀಡಿದ್ದರು ಎಂದು ಅದರ ಸಂಖ್ಯೆ 01426 ಅಗಿರುತ್ತದೆ ಎಂದು, ಅದರ ಮೂಲ ಪ್ರತಿಯನ್ನು ಅವರು ಭದ್ರವಾಗಿ ಇಟ್ಟು ಅದರ ಕಲರ್ ಜೆರಾಕ್ಸನ್ನು ಮಾಡಿಸಿ ಲ್ಯಾಮಿನೇಷನ್ ಮಾಡಿಸಿಕೊಂಡು ಪ್ರತಿದಿನ ಪ್ರಯಾಣದ ಅವದಿಯಲ್ಲಿ ಅದನ್ನು ಅವರ ಬಳಿ ಇಟ್ಟುಕೊಳ್ಳುತ್ತಿದ್ದರು. ಅದರಂತೆ ಒಂದು ದಿನ ಬೆಂಗಳೂರು - ಮೈಸೂರು ರೂಟ್ ನಲ್ಲಿ ನಿರ್ವಾಹಕಿಯಾಗಿ ಕೆಲಸ ಮಾಡುತ್ತಿದ್ದಾಗ ತಮ್ಮ ಬಸ್ಸಿ ನಲ್ಲಿ ಪ್ರಯಾಣಿಸುತ್ತಿದ್ದ ಖಾಕೀ ಸಮವಸ್ತ್ರ ಮತ್ತು ಕೆ.ಎಸ್. ಅರ್,ಟಿ.ಸಿ. ಬ್ಯಾಡ್ಜು ಧರಿಸಿಕೊಂಡು ಒಬ್ಬ ವ್ಯಕ್ತಿಯು ಪ್ರಯಾಣಿಸುತ್ತಿದ್ದು, ಆತನು ತಾನು ಹೊಸದಾಗಿ ಕೆ.ಎಸ್. ಅರ್.ಟಿ.ಸಿ. ನಿರ್ವಾಹಕ ಅಗಿ ನೇಮಕಗೊಂಡಿದ್ದ ಬಗ್ಗೆ ತಿಳಿಸಿರುತ್ತಾರೆ ಎಂದು ಆತನು ಆರೋಪಿಯಾದ ನೀವು ಅಗಿರುತ್ತೀರಾ ಎಂದು, ಆರೋಪಿಯಾದ ನೀವು ಪ್ರಾಸಾ-5 ರವರ ಪಾಸನ್ನು ನೋಡಲು ತೆಗೆದುಕೊಂಡಿರುತ್ತೀರಾ ಎಂದು, ನಂತರ ಪ್ರಾಸಾ-5 ರವರು ಕರ್ತವ್ಯದಲ್ಲಿ ನಿರತರಾಗಿ, ಮದ್ದೂರು ನಿಲ್ದಾಣದ ಬಳಿ ಆರೋಪಿಯಾದ ನಿಮ್ಮನ್ನು ನೋಡಿದಾಗ ನೀವು ಬಸ್ಸಿನಲ್ಲಿ ಇರಲಿಲ್ಲ ವೆಂದು, ಪ್ರಾಸಾ-5 ರವರ ಬಸ್ ಪಾಸ್ ಸಮೇತ ಪರಾರಿಯಾಗಿರುತ್ತೀರಾ ಎಂದು, ಪ್ರಾಸಾ-5 ರವರು ಮೂಲ ಪಾಸನ್ನು ಹಿಂದುರುಗಿಸಿ ನವೀಕರಿಸಿದ ಪಾಸನ್ನು ತೆಗೆದುಕೊಂಡಿರುತ್ತಾರೆ, ಆರೋಪಿಯಾದ ನೀವು ಪ್ರಾಸಾ-5 ರವರ ಪೋಟೋವನ್ನು ಮತ್ತು ಹೆಸರನ್ನು ತೆಗೆದುಹಾಕಿ ನಿಮ್ಮ ಪೋಟೋ ಮತ್ತು ಹೆಸರನ್ನು ಹಾಕಿಕೊಂಡು ಪ್ರಯಾಣ ಮಾಡುತ್ತಿದ್ದ ಸಮಯದಲ್ಲಿ ಸಿಕ್ಕಿ ಹಾಕಿಕೊಂಡಿರುತ್ತೀರಾ ಎಂದು

ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

**ಉತ್ತರಃ**

7) ಪ್ರಾ.ಸಾ-11 ಶ್ರೀ ಮಹೇಶ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ ಅವರು 2009 ರಿಂದ 2013 ರವರೆಗೆ ಬೆಂಗಳೂರಿನ ಕೇಂದ್ರ ವಿಭಾಗ ಘಟಕ 6 ರಲ್ಲಿ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಬೆಳಕವಾಡಿ ಪೋಲೀಸ್ ಠಾಣೆಯಿಂದ ಲೋಕೇಶ್ ಎಂಬ ವ್ಯಕ್ತಿ ತಮ್ಮ ಘಟಕದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆಯೇ ಎಂಬ ಬಗ್ಗೆ ದೃಡೀಕರಣ ಕೇಳಿದ್ದು, ಸದರಿ ವ್ಯಕ್ತಿಯು ತಮ್ಮ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿಲ್ಲ ಎಂದು ದೃಡೀರಣ ಪತ್ರ ನೀಡಿರುವುದಾಗಿ, ತಮ್ಮ ಸಂಸ್ಥೆಯ ಪ್ರಾಸಾ-5 ರವರಿಗೆ ನೀಡಿದ್ದ ಉಚಿತ ಪಾಸನ್ನು ನಕಲು ಮಾಡಿರುವ ಬಗ್ಗೆ ತನಗೆ ತಿಳಿದಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

**ಉತ್ತರಃ**

8) ಪ್ರಾ.ಸಾ-8 ಶ್ರೀ ಚುಂಚ ರವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ ಬೆಳಕವಾಡಿ ಪೋಲೀಸರು ಆರೋಪಿಯಾದ ನಿಮ್ಮಿಂದ ನಕಲಿಸಿ ಪಾಸುಗಳನ್ನು ಅಮಾನತ್ತು ಪಡಿಸಿಕೊಂಡಾಗ ಮಾಡಿದ ಮಹಜರ್ ಗೆ ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

**ಉತ್ತರಃ**

9) ಪ್ರಾ.ಸಾ-9 ಶ್ರೀ ರೇವಣ್ಣ ರವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ ದಿನಾಂಕ 03.08.2013 ರಂದು ಆರೋಪಿಯಾದ ನೀವು ಬೆಳಕವಾಡಿ ಪೋಲೀಸ್ ಠಾಣೆಯಲ್ಲಿ ಕೆ.ಎಸ್.ಅರ್.ಟಿ,ಸಿ. ಬಸ್ಸಿ ನ ನಕಲಿ ಪಾಸನ್ನು ಪೋಲೀಸರ ಮುಂದೆ ಹಾಜರುಪಡಿಸಿದಾಗ ಪೋಲೀಸರು ಮಾಡಿದ ಅಮಾನತ್ತು ಮಹಜರ್ ಗೆ ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

**ಉತ್ತರಃ**

10) ಪ್ರಾ.ಸಾ-12 ಶ್ರೀ ಜಡೇಸ್ವಾಮಿ ರವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ ಬೆಳಕವಾಡಿ ಪೋಲೀಸರು ಆರೋಪಿಯಾದ ನಿಮ್ಮಿಂದ ಕನ್ನಡ ಮತ್ತು ಇಂಗ್ಲೀಷ್ ನಲ್ಲಿ ನಿಮ್ಮ ಕೈ ಬರಹದಿಂದ ಬರೆಸಿಕೊಂಡ ದಾಖಲೆಗಳಿಗೆ ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

**ಉತ್ತರಃ**

11) ಪ್ರಾ.ಸಾ-11 ಶ್ರೀ ಜೀನತ್ ಎಂ. ರವರು ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ ದಿನಾಂಕ 08.08.2013 ರಂದು ತಾನು ಕರ್ತವ್ಯದಲ್ಲಿ ಇದ್ದಾಗ ತನಿಖಾಧಿಕಾರಿಯು 7 ಮೊಹರು ಮಾಡಿದ ಲಕೋಟೆಗಳನ್ನು ತಮ್ಮ ಪ್ರಯೋಗಾಲಯಕ್ಕೆ ಕಳುಹಿಸಿ ಅಭಿಪ್ರಾಯ ಕೋರಿದ್ದು, ಅದರಂತೆ ಸದರಿ 7 ಲಕೋಟೆಗಳನ್ನು ನಿಯಮಾನುಸಾರ ತೆರೆದು ನೋಡಿ ವರದಿಯನ್ನು ನೀಡಿರುವುದಾಗಿ, ಅದರ ಪ್ರಕಾರ ಕೆ.ಎಸ್.ಅರ್.ಟಿ,ಸಿ. ಪಾಸಿನ ಜೆರಾಕ್ಸ ನಕಲುಗಳಾಗಿರುತ್ತವೆ ಎಂದು, ನಿಅರ್-1 ರಿಂದ 6 ಮತ್ತು ಪ್ರಶ್ನಿತ ಬರವಣಿಗೆಯನ್ನು ಕ್ಯೂಡಿ 1ಎ ಮತ್ತು ಕ್ಯೂಡಿ 2ಎ ಇವುಗಳನ್ನು ಒಬ್ಬನೇ ವ್ಯಕ್ತಿಯಿಂದ ಬರೆಯಲಾಗಿರುತ್ತದೆ ಎಂದು ವರದಿಯನ್ನು ತನಿಖಾಧಿಕಾರಿಗೆ ನೀಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

**ಉತ್ತರಃ**

12) ಪ್ರಾ.ಸಾ-13 ಶ್ರೀ ಶಿವಣ್ಣ ರವರು ಪೋಲೀಸ್ ಅಧಿಕಾರಿಯಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ ದಿನಾಂಕ 10.04.2013 ರಂದು ತಾನು ಕರ್ತವ್ಯದಲ್ಲಿ ಇದ್ದಾಗ ಸಂಜೆ 6.30 ರ ಅವದಿಯಲ್ಲಿ ಪ್ರಾಸಾ-3 ರವರು ಆರೋಪಿಯಾದ ನಿಮ್ಮನ್ನು ಕರೆದುಕೊಂಡು ಬಂದು ತನ್ನ ಮುಂದೆ ಹಾಜರುಪಡಿಸಿರುತ್ತಾರೆ ಎಂದು, ಪ್ರಾಸಾ-3 ರವರು ಲಿಖಿತ ದೂರು ಮತ್ತು ನಕಲಿ ಪಾಸುಗಳನ್ನು ಹಾಜರುಪಡಿಸಿದ್ದು, ಅದರ ಮೇರೆಗೆ ಆರೋಪಿಯಾದ ನಿಮ್ಮ ವಿರುದ್ದ ಪ್ರಕರಣ ದಾಖಲು ಮಾಡಿ ಪ್ರ.ವ.ವರದಿಯನ್ನು ತಯಾರು ಮಾಡಿರುವುದಾಗಿ, ಸಾಕ್ಷಿಗಳ ಸಮಕ್ಷಮ ಸದರಿ ನಕಲಿ ಪಾಸುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

**ಉತ್ತರಃ**

13) ಪ್ರಾ.ಸಾ-18 ಶ್ರೀ ಕೆ.ಟಿ.ಜಯರಾಮು ರವರು ಪೋಲೀಸ್ ಅಧಿಕಾರಿಯಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ ಆರೋಪಿಯಾದ ನೀವು ಅವರಿಗೆ ಕೆ.ಎಸ್.ಅರ್.ಟಿ.ಸಿ. ಇಲಾಖೆಯ ಸಮವಸ್ತ್ರ ಧರಿಸಿ ಪೋಟೋ ತೆಗೆಸಿಕೊಂಡು ಕ್ಯಾಪ್ ಹಾಕಿ ಪೋಟೋ ತೆಗೆಸಿಕೊಂಡ ಸ್ಥಳವನ್ನು ತೋರಿಸುವುದಾಗಿ ಹೇಳಿದ ಮೇರೆಗೆ ನಿಮ್ಮ ಜೊತೆ ಅವರು ಬಂದಿದ್ದು, ಆರೋಪಿಯಾದ ನೀವು ಮಾಗಡಿ ಮುಖ್ಯ ರಸ್ತೆಯಲ್ಲಿ ಇರುವ ಪುನೀತ್ ಸ್ಟುಡಿಯೋ ವನ್ನು ತೋರಿಸಿದ್ದು, ಸದರಿ ಸ್ಟುಡಿಯೋದ ಮಾಲೀಕರಾದ ಪ್ರೇಮಕುಮಾರ್ ರವರನ್ನು ಅವರು ವಿಚಾರ ಮಾಡಿದಾಗ ಆರೋಪಿಯಾದ ನೀವು ಅವರ ಸ್ಟುಡಿಯೋದಲ್ಲಿ ಕೆ.ಎಸ್.ಅರ್.ಟಿ.ಸಿ. ಇಲಾಖೆಯ ಸಮವಸ್ತ್ರ ವನ್ನು ಧರಿಸಿ ಪೋಟೋ ತೆಗೆಸಿಕೊಂಡ ಬಗ್ಗೆ ನುಡಿದಿದ್ದು, ಆ ರೀತಿ ಹೇಳಿಕೆಯನ್ನು ದಾಖಲು ಮಾಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

**ಉತ್ತರಃ**

14) ಪ್ರಾ.ಸಾ-18 ರವರು ಮುಂದುವರೆದು ನುಡಿದಿರುವುದೇನೆಂದರೆ ಮೊಬೈಲ್ ಜೆರಾಕ್ಸ ಅಂಗಡಿಯಾದ ಪಿ.ಜಿ.ಕಮೂನಿಕೇಷನ್ ಮೊಬೈಲ್ ಅಂಗಡಿ ಸರ್ವೀಸ್ ಮತ್ತು ಕಲರ್ ಜೆರಾಕ್ಸ ಅಂಗಡಿಯನ್ನು ಆರೋಪಿಯಾದ ನೀವು ತೋರಿಸಿದ ಮೇರೆಗೆ ಅಂಗಡಿ ಮಾಲೀಕರಾದ ಬಿ.ಎನ್. ಗಿರೀಶ್ ರವರನ್ನು ವಿಚಾರ ಮಾಡಲಾಗಿ ಆರೋಪಿಯಾದ ನೀವು ಕೆ.ಎಸ್.ಅರ್.ಟಿ,ಸಿ. ಇಲಾಖೆಯ ಉಚಿತ ಪ್ರಯಾಣದ ಚೀಟಿಯನ್ನು ತಂದು ಎರಡು ಬಾರಿ ಕಲರ್ ಜೆರಾಕ್ಸ ಮಾಡಿಸಿದ ಬಗ್ಗೆ ಹೇಳಿರುತ್ತಾರೆ ಎಂದು, ಅದನ್ನು ಯಥಾವತ್ತಾಗಿ ದಾಖಲು ಮಾಡಿಕೊಂಡು ಆರೋಪಿಯಾದ ನಿಮ್ಮನ್ನು ಠಾಣೆಗೆ ಕರೆದುಕೊಂಡು ಬಂದಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

**ಉತ್ತರಃ**

15) ಪ್ರಾ.ಸಾ-15 ಶ್ರೀ ಮಹದೇವಸ್ವಾಮಿ ರವರು ಪೋಲೀಸ್ ಅಧಿಕಾರಿಯಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ ದಿನಾಂಕ 11.04.2013 ರಂದು ಪ್ರಾಸಾ-13 ರವರಿಂದ ಕಡತವನ್ನು ಪಡೆದು ಪರಿಶೀಲಿಸಿ ಆರೋಪಿಯಾದ ನಿಮ್ಮನ್ನು ವಿಚಾರಣೆ ಮಾಡಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಟ್ಟಿರುವುದಾಗಿ, ದಿನಾಂಕ 24.04.2013 ರಂದು ಪ್ರಾಸಾ-6 ಮತ್ತು ಬೋರಯ್ಯ ರವರ ಹೇಳಿಕೆಗಳನ್ನು ಪಡೆದುಕೊಂಡ ಬಗ್ಗೆ ಮತ್ತು ದಿನಾಂಕ 21.05.2013 ರಂದು 4139 ನಂಬರಿನ ನಿರ್ವಾಹಕರು ಘಟಕದಲ್ಲಿ ಕೆಲಸ ಮಾಡುತ್ತಿದ್ದಾರೆಯೇ ಎಂಬ ಬಗ್ಗೆ ಮಾಹಿತಿ ನೀಡಲು ಕೋರಿ ಕೆಂಗೇರಿ ಕೆ.ಎಸ್.ಅರ್,ಟಿ,ಸಿ. ಡಿಪೋಗೆ ಪತ್ರ ಬರೆದಿರುವುದಾಗಿ, ಅಲ್ಲಿಂದ ಉತ್ತರ ಬಂದಿರುತ್ತದೆ ಎಂದು, ನಂತರದಲ್ಲಿ ತಾನು ವರ್ಗಾವಣೆಯಾಗಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

**ಉತ್ತರಃ**

16) ಪ್ರಾ.ಸಾ-16 ಶ್ರೀ ಮಹೇಶ್ ಎನ್.ವಿ. ರವರು ಪೋಲೀಸ್ ಅಧಿಕಾರಿಯಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ ದಿನಾಂಕ 03.08.2013 ರಂದು ಆರೋಪಿಯಾದ ನಿಮ್ಮನ್ನು ವಿಚಾರಣೆ ಮಾಡಿರುವುದಾಗಿ, ನೀವು ನೀಡಿದ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿರುವುದಾಗಿ, ಆರೋಪಿಯಾದ ನೀವು ಹಾಜರುಪಡಿಸಿದ ಕೆ.ಎಸ್ಅರ್,ಟಿ,ಸಿ. ಪಾಸನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುವುದಾಗಿ, ಆರೋಪಿಯಾದ ನಿಮ್ಮಿಂದ ಕನ್ನಡ ಮತ್ತು ಇಂಗ್ಲೀಷ ಬರವಣೆಗೆಯನ್ನು ಪಂಚರ ಸಮಕ್ಷಮ ಪಡೆದುಕೊಂಡಿರುವುದಾಗಿ, ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಾಗಿ, ಕೈ ಬರಹದ ದಾಖಲೆಯನ್ನು ತಜ್ಞರಿಗೆ ಕಳುಹಿಸಿಕೊಟ್ಟಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

**ಉತ್ತರಃ**

17) ಪ್ರಾ.ಸಾ-14 ಶ್ರೀ ಎಂ.ನಂಜಪ್ಪ ರವರು ಪೋಲೀಸ್ ಅಧಿಕಾರಿಯಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ ದಿನಾಂಕ 27.09.2013 ರಂದು ಈ ಪ್ರಕರಣದ ಕಡತವನ್ನು ಪ್ರಾಸಾ-16 ರವರಿಂದ ಸ್ವೀಕರಿಸಿ ತನಿಖೆ ಮುಂದುವರೆಸಿ ದಿನಾಂಕ 25.12.2013 ರಂದು ರಾಸಾಯನಿಕ ಪರೀಕ್ಷಾ ವರದಿಯನ್ನು ಸ್ವೀಕರಿಸಿದ ಬಗ್ಗೆ ಮತ್ತು ತನಿಖೆ ಪೂರೈಸಿ ಆರೋಪಿಯ ವಿರುದ್ದ ದೋಷರೋಪಣೆ ಪಟ್ಟಿಯನ್ನು ಸಲ್ಲಿಸಿದ ಬಗ್ಗೆ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

**ಉತ್ತರಃ**

18) ನಿಮ್ಮ ಪರ ಸಾಕ್ಷ್ಯ ವಿಚಾರಣೆ ಮಾಡಿಸುವಿರಾ?

ಉತ್ತರಃ

19) ನೀವು ನ್ಯಾಯಾಲಯಕ್ಕೆ ಹೆಚ್ಚುವರಿಯಾಗಿ ಏನಾದರೂ ಹೇಳುವುದು ಇದೆಯೇ?

ಉತ್ತರಃ

(ಮೇಲ್ಕಂಡ ಆರೋಪಿಯ ಹೇಳಿಕೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಂಡು ಆರೋಪಿ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸುತ್ತೇನೆ.)

ದಿನಾಂಕ 21.04.2025.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.